ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWSPAPER:

ದಿನಾಂಕ : DATE:

ಕಾನೂನು ಕ್ರಮ ಎಚ್ಚರಿಕೆ ನೀಡಿದ ಸ್ಪೀಕರ್ | ರಾಮಲಿಂಗಾರೆಡ್ಡಿ ಅವರನ್ನು ಸಮಾಧಾನಪಡಿಸಿದ ಕೈ ನಾಯಕರು

# ಕಾಗೇರಿ ವಿರುದ್ಧ ಕಾವೇರಿದ ರೆಡ್ಡಿ

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹಿರಿಯ ಶಾಸಕ ರಾಮಲಿಂಗಾರೆಡ್ಡಿ ಹಾಗೂ ಸ್ಪೀಕರ್ ಕಾಗೇರಿ ನಡುವಿನ ಮಾತು ತಾರಕಕ್ಕೇರಿ ಇಬ್ಬರ ನಡುವೆ ಭಾರಿ ವಾಗ್ವಾದಕ್ಕೆ ಕಾರಣವಾಯಿತು.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಬಳಿಕ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಲು ರಾಮಲಿಂಗಾರೆಡ್ಡಿ ಮುಂದಾದರು. ಆದರೆ ಅವರಿಗೆ ಅವಕಾಶ ನೀಡದೆ, ಜೆಡಿಎಸ್ ಶಾಸಕರಿಗೆ ಸ್ಪೀಕರ್ ಅವಕಾಶ ನೀಡಿದರು. ಇದಕ್ಕೆ ಇಬ್ಬರ ನಡುವೆ ಶುರುವಾದ ಮಾತು ತಾರಕಕ್ಕೇರಿದ ಘಟನೆ ನಡೆಯಿತು.

ಜೆಡಿಎಸ್ ಶಾಸಕರ ಬಳಿಕ ನನಗೆ ಅವಕಾಶ ನೀಡುವಂತೆ ರಾಮಲಿಂಗಾರೆಡ್ಡಿ ಅವರು ಕೇಳಿದಕ್ಕೆ, ಯಾರಿಗೆ ನೀಡಬೇಕು ಎನ್ನುವುದನ್ನು ನಾನು ನಿರ್ಧರಿಸುವೆ ಎನ್ನುವ ಸ್ಪೀಕರ್ ಮಾತು ಇಷ್ಟೆಲ್ಲ ಗದ್ದಲಕ್ಕೆ ಕಾರಣವಾಯಿತು. ಹಿರಿಯ ಶಾಸಕರೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದು ಗೊತ್ತಿಲ್ಲವೆಂದು ಗರಂ ಆದ ರಾಮಲಿಂಗಾರೆಡ್ಡಿ, ಸ್ಪೀಕರ್ ವಿರುದ್ಧ ವಾಗ್ದಾಳಿ ನಡೆಸಿದರು. ಇಬ್ಬರ ನಡುವೆ ವಾಕ್ಸಮರ ಹೆಚ್ಚಾಗುತ್ತಿದ್ದಂತೆ, ಕಾಂಗ್ರೆಸ್ ನಾಯಕರು ರಾಮಲಿಂಗಾರೆಡ್ಡಿ ಅವರನ್ನು ಸಮಾಧಾನಪಡಿಸಲು ಮುಂದಾದರೂ, ಸ್ಪೀಕರ್ ವಿರುದ್ಧ ವಾಗ್ದಾಳಿ ನಡೆಸುವುದನ್ನು ರೆಡ್ಡಿ ಬಿಡಲಿಲ್ಲ, ಅಂತಿಮವಾಗಿ ಖಂಡ್ರೆ, ಅವರು ಮಧ್ಯಪ್ರವೇಶಿಸಿ ಜಗಳವನ್ನು ನಿಲ್ಲಿಸಿದರು. ಇದಾಗುತ್ತಿದ್ದಂತೆ ರಾಮಲಿಂಗಾರೆಡ್ಡಿ ಅವರು ನಾನು ಮಾತನಾಡುವುದಿಲ್ಲವೆಂದು ಹೇಳಿ ಹೊರನಡೆದರು.

**ಮೊಗಸಾಲೆಯಲ್ಲಿ ಕುಳಿತು ಬೇಸರ:** ಈ ಘಟನೆಯಾಗುತ್ತಿದ್ದಂತೆ ಕಾಂಗ್ರೆಸ್ ಶಾಸಕರು ರಾಮಲಿಂಗಾರೆಡ್ಡಿ ಅವರು ಸದನದಿಂದ ಹೊರನಡೆದರು. ಈ ವೇಳೆ ಕಾಗೇರಿ ಅವರ ನಡೆಗೆ ಆಕ್ಷೇಪ ವ್ಯಕ್ತಪಡಿಸುತ್ತಲೇ ಹೊರಬಂದ ರೆಡ್ಡಿ ಅವರೊಂದಿಗೆ ಮಾಜಿ ಸಚಿವರಾದ ಎಂ.ಬಿ.ಪಾಟೀಲ್, ಈಶ್ವರ ಖಂಡ್ರೆ ಹಾಗೂ ಪ್ರಿಯಾಂಕ್ ಖರ್ಗೆ ಅವರು ಆಗಮಿಸಿ ಸಮಾಧಾನಪಡಿಸಲು ಪ್ರಯತ್ನಿಸಿದರು. ಈ ವೇಳೆ ಮೊಗಸಾಲೆಯಲ್ಲಿ ಕುಳಿತುಕೊಂಡ ರಾಮಲಿಂಗಾರೆಡ್ಡಿ ಅವರು, ಹಿರಿಯ ಶಾಸಕರನ್ನು ಯಾವ ರೀತಿ ನಡೆಸಿಕೊಳ್ಳಬೇಕೆಂದು ಗೊತ್ತಿಲ್ಲವೇ ಎಂದು ಕಾಂಗ್ರೆಸ್ ಶಾಸಕರ ಬಳಿಕ ಬೇಸರವ್ಯಕ್ತಪಡಿಸಿದರು. ಮಾತನಾಡಲು ಅವಕಾಶ ನೀಡದಿದ್ದರೂ ಪರವಾಗಿಲ್ಲ, ಅದನ್ನು ಬಿಟ್ಟು ಕಾನೂನು ಕ್ರಮ ಎನ್ನುವುದಕ್ಕೆ ನಾವೇನು ಮಾಡಿದ್ದೇವೆ ಎಂದು ಅಸಮಾಧಾನ ಹೊರಹಾಕಿದರು.



ಸದನದ ಹಿರಿಯ ಶಾಸಕ ರಾಮಲಿಂಗಾರೆಡ್ಡಿ ಹಾಗೂ ವಿಧಾನಸಭಾಧ್ಯಕ್ಷ ಹೆಗಡೆ ಕಾಗೇರಿ ಅವರ ನಡುವೆ ನಡೆದ ಮಾತಿನ ಚಕಮಕಿ ಇಲ್ಲಿ




ಎಲ್ಲರಿಗೂ ಅವಕಾಶ ನೀಡುತ್ತೇನೆ, ಕುಳಿತುಕೊಳ್ಳಿ

ಸರಿ, ಅವರ ಬಳಿಕ ನನಗೆ ಮಾತನಾಡಲು ಅವಕಾಶ ಕೊಡಿ

ಯಾರಿಗೆ ಕೊಡಬೇಕು ಎನ್ನುವುದು ಗೊತ್ತಿದೆ

ಏನು ಮಾತಡ್ತಾ ಇದ್ದೀರಾ ಇದಲ್ಲ ಒಳ್ಳೆಯದಲ್ಲ

ಸ್ಪೀಕರ್ ಆಗಿ ಏನು ಮಾಡಬೇಕೆಂದು ನಿಮ್ಮಿಂದ ಕಲಿಯಬೇಕಿಲ್ಲ

ನಾನು ನಿಮ್ಮಿಂದ ಕಲಿಯಬೇಕಾ ಈ ಸದನದ ಹಿರಿಯ...

ಆಯ್ತು ಸುಮ್ನೆ ಕೂತ್ಕೊಳ್ರಿ.. ಇಲ್ಲ ಅಂದ್ರ ನಿಯಮಾವಳಿಯ ರೀತಿ ಕ್ರಮ ಕೈಗೊಳ್ಳಬೇಕಾಗುತ್ತದೆ

ಏನ್, ಏನು ಕ್ರಮ ಕೈಗೊಳ್ತೀರಾ ನೀವೆಲ್ಲ ಡಿಕ್ಟೇಟ್ ಮಾಡಬೇಡಿ

ನಾನು ಕರೆದಾಗ ಮಾತನಾಡಬೇಕು ಅಷ್ಟೇ.. ರೀ ನೀವು ಮಾತು ಮುಂದುವರಿಸಿ

ನೀವು ಹೇಳಿದಂತೆ ಕೇಳಬೇಕಾ ನಿಮ್ ಕೈಲಿ ಏನ್ರಿ ಮಾಡೋಕೆ

ರೀ ಸುಮ್ನೆ ಕುಳಿತುಕೊಳ್ಳಿ

ಇದೆಲ್ಲ ಸರಿ ಇರೋಲ್ಲ